ಅಸಲು ದಾವೆ ಸಂಖ್ಯೆ - 229/2017
ಡಿ.ಡಬ್ಲ್ಯೂ - 01
ದಿನಾಂಕಃ 30-01-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರ ಶ್ರೀ. ಎಫ್ ಎನ್ ಎನ್ ವಕೀಲರಿಂದ</u>

ಈ ದಾವೆಯ ಬಗ್ಗೆ ನನಗೆ ಮಾಹಿತಿ ಇದೆ. ವಾದಿಯರು ಯಾವ ಉದ್ದೇಶಕ್ಕಾಗಿ ದಾವೆ ಮಾಡಿದ್ದಾರೆ ಎಂದರೆ ತಮ್ಮ ಪಾಲು ಕೇಳಿ ದಾವೆ ಮಾಡಿದ್ದಾರೆ. ಯಾವಾ ಯಾವ ಆಸ್ತಿಗಳ ಮೇಲೆ ದಾವೆಯನ್ನು ಹೂಡಿದ್ದಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ಸರ್ವೆ ನಂ. 138/2, 23/ಬ 2, 48/2, 103 ಮತ್ತು ಮನೆಯ ಆಸ್ತಿಯಾದ 373 ರ ಮೇಲೆ ದಾವೆ ಮಾಡಿದ್ದಾರೆ. ದಾವಾ ಆಸ್ತಿಗಳ ನಂಬರನ್ನು ಓದಿ ಹೇಳಿದ್ದು ಇವುಗಳ ಮೇಲೆ ವಾದಿಯರು ದಾವೆ ಮಾಡಿದ್ದಾರೆ ಎಂದರೆ ಸರಿ.

ನಿಮ್ಮ ಮತ್ತು ವಾದಿಯರ ಕುಟುಂಬದ ಮೂಲ ಪುರಷ ಭರಮಣ್ಣ ಎಂದರೆ ಸರಿ. ಭರಮಣ್ಣನಿಗೆ ಚನ್ನಬಸವ್ವ ಎಂಬ ಹೆಂಡತಿ ಇದ್ದರು ಎಂದರೆ ಸರಿ. ಇವರು ಪೋತಿಯಾಗಿರುತ್ತಾರೆ ಎಂದರೆ ಸರಿ. ಭರಮಣ್ಣ ಮತ್ತು ಚನ್ನಬಸವ್ವ ರವರಿಗೆ, ಬಸಪ್ಪ, ಯಲ್ಲಪ್ಪ, ಹನಮಂತಪ್ಪ ಎಂಬ ಮೂರು ಮಕ್ಕಳು ಎಂದರೆ ಸರಿ.

ಯಲ್ಲಪ್ಪನಿಗೆ ಹಾಲವ್ವ ಎಂಬ ಹೆಂಡತಿ ಎಂದರೆ ಸರಿ. ಇಬ್ಬರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಯಲ್ಲಪ್ಪ ಮತ್ತು ಹಾಲವ್ವಳಿಗೆ ಪುಟ್ಟವ ಮತ್ತು ಮಾಂತೇಶ ಎಂಬ ದತ್ತಕ ಮಗ ಇದ್ದಾರೆ ಎಂದರೆ ಸರಿ.

ಹನಮಂತಪ್ಪನಿಗೆ ಶಿವಕ್ಕ ಎಂಬ ಹೆಂಡತಿ ಇದ್ದಳು ಎಂದರೆ ಸರಿ. ಅವರು ಈಗ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರಿಗೆ ನಿಂಗಪ್ಪ, ಸಾಮಕ್ಕ, ಭರಮಪ್ಪ ಮತ್ತು ನೆಹರು ಎಂಬ ಮಕ್ಕಳು ಇದ್ದಾರೆ ಎಂದರೆ ಸರಿ. ನಿಂಗಪ್ಪ ಹೆಂಡತಿ ಶಂಕುತಲಾ, ಅವರಿಗೆ ಅಶೋಕ, ರೇಣುಕಾ, ಶೇಖರ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿ. ಅದೇ ರೀತಿ ನೆಹರು ಎನ್ನುವ ಮಗ ತೀರಿಕೊಂಡಿದ್ದಾರೆ ಎಂದರೆ ಸರಿ. ಅವನಿಗೆ ಮಹಾದೇವಕ್ಕ ಎಂಬ ಹೆಂಡತಿ, ಸೋಮಣ್ಣ, ಸುಜಾತಾ, ಲಕ್ಷ್ಮಣ ಎಂಬ ಮಕ್ಕಳು ಇದ್ದಾರೆ ಎಂದರೆ ಸರಿ.

ಭರಮಣ್ಣ ಮತ್ತು ಚನಬಸವ್ವನ ಮಗ ಬಸಪ್ಪನಿಗೆ ದೇವಕ್ಕ ಎಂಬ ಹೆಂಡತಿ ಇದ್ದಳು ಎಂದರೆ ಸರಿಯಲ್ಲ. ಮುಂದುವರೆದು ಬಸಪ್ಪನು ಮದುವೆಯಾಗಿರುವುದಿಲ್ಲ. ಬಸಪ್ಪ ರವರಿಗೆ

ಮದುವೆಯಾಗಿಲ್ಲ ಎಂದು ಯಾವುದಾದರೂ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಯಾವ ದಾಖಲೆಯನ್ನು ಹಾಜರುಮಾಡಿರುತ್ತೀರಿ ಎಂದರೆ ಅದು ನಮ್ಮ ವಕೀಲರಿಗೆ ಗೊತ್ತು. ಬಸಪ್ಪ ರವರಿಗೆ ದೇವಕ್ಕ ಎಂಬ ಹೆಂಡತಿ, ಪುಟ್ಟವ್ವ, ಗುಡ್ಡಪ್ಪ ಮತ್ತು ಮಲ್ಲಪ್ಪ ಎಂಬ ಮಕ್ಕಳು ಇದ್ದರು ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಅವರಿಗೆ ಮದುವೆಯೇ ಆಗಿರುವುದಿಲ್ಲ.

ವಾದಿಯರು ಬಸ್ಸಪ್ಪನ ವಾರಸುದಾರರು ಎಂದರೆ ಸುಳ್ಳು. ವಾದಿಯರು ಬಸಪ್ಪನ ವಾರಸುದಾರರು ಇದ್ದರು ಸಹ ಬಸ್ಸಪ್ಪನ ಆಸ್ತಿಯನ್ನು ಹೊಡೆಯುವ ಸಲುವಾಗಿ ವಾರಸುದಾರರು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಿಮಗೆ ಮತ್ತು ವಾದಿಯರಿಗೆ ಹಿರಿಯರಿಂದ ಬಂದ ಆಸ್ತಿ ಎಂದರೆ ಸರಿ. ಮುಂದುವರೆದು ಅವರು ಖರೀದಿಸಿರುತ್ತಾರೆ. ಚನ್ನಬಸವ್ವರವರಿಂದಲೂ ಸಹ ಆಸ್ತಿಗಳು ಬಂದಿರುತ್ತವೆ ಎಂದರೆ ಸರಿ. ಭರಮಣ್ಣ ಮತ್ತು ಚನಬಸವ್ವ ಪೋತಿ ಆದ ನಂತರ ಅವರ ಆಸ್ತಿಗಳಿಗೆ ಬಸಪ್ಪ,ಯಲ್ಲಪ್ಪ ಮತ್ತು ಹನಮಂತಪ್ಪ ರವರ ಹೆಸರಗಳು ಜಂಟಿಯಾಗಿ ದಾಖಲಾಗಿರುತ್ತವೆ ಎಂದರೆ ಸರಿ.

ಬಸಪ್ಪನು ಬಹಳ ದಿನಗಳ ಹಿಂದೆಯೇ ತೀರಿಕೊಂಡಿದ್ದಾನೆ ಎಂದರೆ ಸರಿ. ಮುಂದುವರೆದು 1980 ಕ್ಕಿಂತ ಮೊದಲೇ ತೀರಿಕೊಂಡಿದ್ದಾನೆ. ಬಸಪ್ಪರವರು 1980 ಕ್ಕಿಂತ ಮೊದಲೇ ತೀರಿಕೊಂಡಿದ್ದಾರೆ ಎಂದು ಯಾವುದಾದರೂ ದಾಖಲೆಯನ್ನು ಹಾಜರುಡಿಸಿರುತ್ತೀರಿ ಎಂದರೆ ಇಲ್ಲ. ಅವನು ತೀರಿಕೊಂಡಿದ್ದು ನಮಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿ ಕುರಿತು ನಿಮ್ಮ ಮತ್ತು ಬಸ್ಸಪ್ಪನ ವಾರಸುದಾರರ ನಡುವ ಅಂದರೆ ವಾದಿಯರ ನಡುವೆ ಯಾವುದೇ ನ್ಯಾಯಾಲಯದಿಂದ ಅಥವಾ ನೊಂದಾಯಿತ ದಾಖಲೆಯಿಂದ ಪಾಲುವಿಭಾಗ ಆಗಿಲ್ಲ ಎಂದರೆ ಸರಿ. ಹನಮಂತಪ್ಪನು ನಿಮ್ಮ ಮತ್ತು ಬಸಪ್ಪನ ಕುಟುಂಬದ ಮುಖ್ಯಸ್ಥನಾಗಿ ವ್ಯವಹಾರ ಮಾಡುತ್ತಿದ್ದನು ಎಂದರೆ ಸುಳ್ಳು ಇರುತ್ತದೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.